## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ನಿಯಮ 330 ರಡಿ ನೀಡಿರುವ ಗಮನ ಸೆಳೆಯುವ ಸೂಚನೆ

**"ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ ಸಮರ್ಪಕವಾಗಿ ದೈನಂದಿನ ಪೂಜಾ ಕಾರ್ಯಗಳನ್ನು ಕೈಗೊಳ್ಳಲು ಅರ್ಚಕರ ನೇಮಕಾತಿ ಹಾಗೂ ಹಲವಾರು ತಿಂಗಳಿನಿಂದ ಅರ್ಚಕರಿಗೆ ತಸ್ತೀಕ್ ಸಂದಾಯವಾಗದಿರುವ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸುರತ್ಕಲ್‌ನಲ್ಲಿನ ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನಕ್ಕೆ ಅನುವಂಶಿಕ ಮೊಕ್ತೇಸರ ನೇಮಕದಲ್ಲಿ ನಿಯಮಗಳಿಗೆ ವಿರುದ್ಧವಾಗಿ ಹಿರಿಯರನ್ನು ನೇಮಿಸದೇ ನಿಯಮದಲ್ಲಿ ಅವಕಾಶವಿಲ್ಲದಿದ್ದರೂ ಇಬ್ಬರಿಗೆ ಮೊಕ್ತೇಸರಿಕೆ ಆದೇಶ ಹೊರಡಿಸಿರುವ ಕುರಿತು ನಿಯಮ 330 ರಡಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಹೇಳಿಕೆ.**

*********

**ಉತ್ತರ** :-

ದಕ್ಷಿಣ ಕನ್ನಡ ಜಿಲ್ಲಾ ಸುರತ್ಕಲ್‌ನಲ್ಲಿನ ಶ್ರೀ ಸದಾಶಿವ ಮಹಾಗಣಪತಿ ದೇವಾಲಯದ ಈ ಹಿಂದಿನ ಮೊಕ್ತೇಸರರಾದ ದಾಸಮಯ್ಯ ಎಂಬುವವರಿಗೆ ಪ್ರಭಾಕರ ಮಯ್ಯ ಮತ್ತು ಗಣಪತಿ ಮಯ್ಯ ಎಂಬ ಇಬ್ಬರು ಗಂಡು ಮಕ್ಕಳಿದ್ದು, ದಿನಾಂಕ:22.07.2019 ರಂದು ಹಿರಿಯ ಮಗನಾದ ಪ್ರಭಾಕರ ಮಯ್ಯರವರು ತನ್ನ ತಂದೆಯ ನಿಧನದಿಂದ ತೆರವಾಗಿರುವ ದೇವಾಲಯದ ಅನುವಂಶಿಕ ಅರ್ಚಕ ಮತ್ತು ಮೊಕ್ತೇಸರರ ಸ್ಥಾನಕ್ಕೆ ತನ್ನ ತಮ್ಮನಾದ ಗಣಪತಿ ಮಯ್ಯ ರವರನ್ನು ನೇಮಿಸಲು ತನ್ನ ಆಕ್ಷೇಪಣೆ ಇಲ್ಲವೆಂದು ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ನಂತರದಲ್ಲಿ ಸದರಿಯವರು ದಿನಾಂಕ:19.01.2022 ರಂದು ನೀಡಿರುವ ಪತ್ರದಲ್ಲಿ ತಾನು ಈ ಹಿಂದೆ ನೀಡಿದ್ದ ನಿರಾಕ್ಷೇಪಣೆ ಪತ್ರವನ್ನು ಮತ್ತು ಅನುಮತಿ ಪತ್ರವನ್ನು ರದ್ದುಪಡಿಸಿದ್ದು, ಅನುವಂಶಿಕ ಮೊಕ್ತೇಸರರ ಸ್ಥಾನವನ್ನು ತನಗೇ ನೀಡುವಂತೆ ಮನವಿ ಮಾಡಿರುತ್ತಾರೆ. ಈ ಕುರಿತು ಸ್ಪಷ್ಟ ಅಭಿಪ್ರಾಯದ ವರದಿಯನ್ನು ಪಡೆಯಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿರುತ್ತದೆ.

ಅದರನ್ವಯ, ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಸಲ್ಲಿಸಿರುವ ವರದಿಯಲ್ಲಿ ದಾಸಮಯ್ಯ ರವರ ನಿಧನದಿಂದ ತೆರವಾದ ಸ್ಥಾನಕ್ಕೆ ಅವರ ಮಕ್ಕಳಾದ ಶ್ರೀ ಪ್ರಭಾಕರ ಮಯ್ಯ, ಶ್ರೀ ಗಣಪತಿ ಮಯ್ಯ ಮತ್ತು ಅವರ ಕುಟುಂಬದ ಮತ್ತೊಂದು ಕವಲಿನ ದಿವಂಗತ ಕೃಷ್ಣ ಮಯ್ಯರವರ ಮಗನಾದ ಶ್ರೀ ವೆಂಕಟರಮಣ ಮಯ್ಯ ರವರು ಆಕ್ಷಾಂಕ್ಷಿಗಳಾಗಿರುವುದರಿಂದ, ಶ್ರೀ ಸದಾಶಿವ ಗಣಪತಿ ದೇವಸ್ಥಾನದ ಅನುವಂಶಿಕ ಮೊಕ್ತೇಸರರ ನಿಧನದಿಂದ ತೆರವಾದ ಸ್ಥಾನಕ್ಕೆ ದಾಖಲಾತಿ ಮಾಡುವವರೆಗೆ ಪ್ರಸ್ತಾವನೆಯನ್ನು ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ, ತೀರ್ಮಾನ ಕೈಗೊಳ್ಳಲು ಕೋರಿರುತ್ತಾರೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011 ರ ಕಲಂ 20-ಎ(2)(vii) ರ ಅಡಿಯಲ್ಲಿ ಶಾಶ್ವತ ಖಾಲಿ ಸ್ಥಾನವು ಉಂಟಾದಾಗ ಮತ್ತು ವಂಶಪಾರಂಪರ್ಯ ಪದದಲ್ಲಿ ಅದಕ್ಕೆ ಯಾವುದೇ ವಿವಾದವಿಲ್ಲದಿದ್ದರೆ, ವಂಶ ಪಾರಂಪರ್ಯ ನ್ಯಾಸಧಾರಿಯ ಪದಕ್ಕೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಕುಟುಂಬದ ಸದಸ್ಯರ ಹೆಸರನ್ನು ದಾಖಲು ಮಾಡುವ ಅಧಿಕಾರವು ರಾಜ್ಯ ಧಾರ್ಮಿಕ ಪರಿಷತ್ತಿಗೆ ಪ್ರದತ್ತವಾಗಿರುತ್ತದೆ.

ಅದರಂತೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ವಿಧಿ 25 ರ ಪ್ರಕಾರ 'ಅಧಿಸೂಚಿತ ಸಂಸ್ಥೆ' ಎಂಬುದಾಗಿ ಘೋಷಿತವಾದ ದಕ್ಷಿಣ ಕನ್ನಡ ಜಿಲ್ಲೆ, ಸುರತ್ಕಲ್‌ನಲ್ಲಿರುವ ಶ್ರೀ ಸದಾಶಿವ ಗಣಪತಿ ದೇವಸ್ಥಾನದ ಅನುವಂಶಿಕ ಮೊಕ್ತೇಸರಿಕೆ ಹಾಗೂ ಅರ್ಚಕತನಕ್ಕೆ ಸಂಬಂಧಪಟ್ಟ ವಿವಾದದ ಇತ್ಯರ್ಥಕ್ಕಾಗಿ ಈ ಅರ್ಜಿಯ ಬಗ್ಗೆ ಪ್ರಾಥಮಿಕ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು (1ನೇ ಎದುರುದಾರರು) ಈ ವಿವಾದ ರಾಜ್ಯ ಧಾರ್ಮಿಕ ಪರಿಷತ್ತಿನ ವ್ಯಾಪ್ತಿಗೆ ಸದರಿ ಅಧಿನಿಯಮದ ಪ್ರಕಾರ ಒಳಪಟ್ಟಿರುವುದನ್ನು ಗಮನಿಸಿ ಈ ಪ್ರಕರಣವನ್ನು ರಾಜ್ಯ ಧಾರ್ಮಿಕ ಪರಿಷತ್ತಿಗೆ ಒಪ್ಪಿಸಿರುತ್ತಾರೆ. ರಾಜ್ಯ ಧಾರ್ಮಿಕ ಪರಿಷತ್ತಿನ ದಿನಾಂಕ:13.10.2023 ರ ಸಭೆಯಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ವಿಧಿ 25ರ ಪ್ರಕಾರ **ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತಿನ ನ್ಯಾಯಾಧಿಕರಣಕ್ಕೆ ಈ ಪ್ರಕರಣವನ್ನು ಒಪ್ಪಿಸಿದ ಹಿನ್ನೆಲೆಯಲ್ಲಿ ನ್ಯಾಯಾಧೀಕರಣದಲ್ಲಿ ಈ ಪ್ರಕರಣದ ವಿಚಾರಣೆ ನಡೆದಿರುತ್ತದೆ.**

ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತಿನ ನ್ಯಾಯಾಧಿಕರಣದಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆದು ದಿನಾಂಕ:28.06.2024ರಲ್ಲಿ ಅಭಿಪ್ರಾಯವನ್ನು ದಾಖಲಿಸಿ, ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

".......13. ಗಣಪತಿ ಮಯ್ಯರು ತನ್ನ ಪ್ರಾಧ್ಯಾಪಕ ವೃತ್ತಿಯನ್ನು ನಡೆಸುವುದರ ಜೊತೆಗೆ ತಂದೆ ದಾಸಮಯ್ಯರ ಜೊತೆಗೇನೇ ಅವರ ಜೀವಿತ ಕಾಲದಲ್ಲಿದ್ದುಕೊಂಡು ಅವರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾ ಈ ಹಕ್ಕನ್ನು ನಿಭಾಯಿಸುವಲ್ಲಿ ತಂದೆಗೆ ನೆರವಾಗುತ್ತಾ ಬಂದಿದ್ದಾರೆ ಎಂಬುದು ಇಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ. ಅದೇ ರೀತಿ ಪ್ರಭಾಕರ ಮಯ್ಯರು ಹಿರೇ ಮಗನಾಗಿದ್ದರೂ ತನ್ನ ಜೀವನ ನಿರ್ವಹಣೆಗಾಗಿ ಪರಸ್ಥಳದಲ್ಲಿದ್ದುದರಿಂದ, ತನ್ನ ತಂದೆ ದಾಸಮಯ್ಯರಿಗೆ ಈ ಹಕ್ಕನ್ನು ನಿರ್ವಹಿಸುವಲ್ಲಿ ನೆರವಾದದ್ದಿಲ್ಲ ಎಂಬುದೂ ಅಷ್ಟೇ ಗಮನಾರ್ಹವಿದೆ. ಆದುದರಿಂದ, ಇವರಿಬ್ಬರೂ ಏಕಸ್ವರಾಗಿ ಏಕ ಮನಸ್ಸಿನಿಂದ ಈ ಹಕ್ಕನ್ನು ಚಲಾಯಿಸಿಕೊಂಡು ಬರಲು ಅವಕಾಶ ಕಲ್ಪಿಸುವುದು ಸೂಕ್ತ ಹಾಗೂ ಸಮಂಜಸ ಎಂಬುದಾಗಿ ಈ ನ್ಯಾಯಾಧಿಕರಣದ ಅಭಿಮತ. ಯಾವುದೇ ಅಧಿಸೂಚಿತ ಸಂಸ್ಥೆಗೆ ಒಂದಕ್ಕಿಂತ ಹೆಚ್ಚು ಅನುವಂಶಿಕ ಮೊಕ್ತೇಸರರನ್ನು ನೇಮಿಸಬಾರದು ಎಂಬುದಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರಲ್ಲಿ ಪ್ರತಿಬಂಧಕವಿಲ್ಲ. ಒಂದಕ್ಕಿಂತ ಹೆಚ್ಚು ಅನುವಂಶಿಕ ನ್ಯಾಸದಾರಿಗಳಿದ್ದಲ್ಲಿ ಕಾರ್ಯನಿರ್ವಹಣೆಯ ಬಗ್ಗೆ ಕಲಂ 26(4) ರಲ್ಲಿ ಸಂದರ್ಭೋಚಿತವಾಗಿ ಪ್ರಸ್ತಾಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಒಂದಕ್ಕಿಂತ ಹೆಚ್ಚು ಅನುವಂಶಿಕ ನ್ಯಾಸದಾರಿಗಳನ್ನು ನೇಮಿಸುವುದು ತಪ್ಪಾಗಲಾರದು. ಸುರಳೀತವಾಗಿ ಈ ಹಕ್ಕಿನ ನಿರ್ವಹಣೆಗೆ ಪ್ರಸ್ತುತ ಸನ್ನಿವೇಶದಲ್ಲಿ ಇಂತಹ ನೇಮಕಾತಿ ಇಲ್ಲಿ ಅನಿವಾರ್ಯವಿದೆ.

14. ಆದುದರಿಂದ, ಈ ಹಕ್ಕು ಸಮಸ್ಯೆಗಳ ಆಗರವಾಗಬಾರದು ಎಂಬು ಉದ್ದೇಶದಿಂದ, ಈ ಮೇಲೆ ಕಾಣಿಸಿದ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಇಲ್ಲಿ ಅಧಿಕೃತ ಸಂಸ್ಥೆಯಾಗಿರುವ ಸುರತ್ಕಲ್ಲಿನ ಶ್ರೀ ಸದಾಶಿವ ಗಣಪತಿ ದೇವಸ್ಥಾನಕ್ಕೆ ಇವರಿಬ್ಬರನ್ನೂ ದಾಸಮಯ್ಯರ ನಿಧನದಿಂದಾಗಿ ತೆರವಾದ ಸ್ಥಾನಕ್ಕೆ ಅನುವಂಶಿಕ ನ್ಯಾಸದಾರಿಗಳೆಂದು ಘೋಷಿಸಿ, ಹಿರಿಯರಾದ ಪ್ರಭಾಕರ ಮಯ್ಯರ ಮೇಲ್ವಿಚಾರಣೆಯಲ್ಲಿ ಮತ್ತು ಮಾರ್ಗದರ್ಶನದಲ್ಲಿ ಈ ಅನುವಂಶಿಕವಾಗಿ ಪ್ರಾಪ್ತವಾದ ಮೊಕ್ತೇಸರಿಕೆ ಮತ್ತು ಅರ್ಚಕ ವೃತ್ತಿಯನ್ನು ಯಾವುದೇ ಲೋಪದೋಷಗಳಿಲ್ಲದೆ ಹಾಗೂ ಯಾವುದೇ ವಿವಾದಗಳಿಗೆ ಆಸ್ಪದ ಕೊಡದೆ ನಿರ್ವಹಿಸಿಕೊಂಡು ಬರುವ ಗುರುತರವಾದ ಹೊಣೆಗಾರಿಕೆ ಗಣಪತಿ ಮಯ್ಯರದ್ದು ಎಂಬುದಾಗಿ ನ್ಯಾಯಾಧಿಕರಣವು ಘೋಷಿಸಿದೆ."

ಈ ಹಿನ್ನೆಲೆಯಲ್ಲಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪ್ರಸ್ತಾಪಿತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿನ ಶ್ರೀ ಸದಾಶಿವ ಮಹಾಗಣಪತಿ ದೇವಾಲಯದ ಮೊಕ್ತೇಸರಿಕೆಗೆ ಇಬ್ಬರನ್ನು ನಿಯಮಬದ್ಧವಾಗಿ ನೇಮಿಸಿ, ಆದೇಶ ಹೊರಡಿಸಿರುತ್ತಾರೆ.

(ಸಂಖ್ಯೆ:ಕಂಇ 96 ಮುಸಪ್ರ 2024)

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು